ಬೆವಿಕಂ

BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ- 11 ಸಂಚಿಕೆ-2 ತ್ರೈಮಾಸಿಕ ಜುಲೈ-ಸೆಪ್ಟೆಂಬರ್ 2023 ಪುಟಗಳು-12



# ಬಾಂಧವ್ಯ ಬೆಸೆಯುವ ಗಣೇಶ ಹಬ್ಬ

ಬೆವಿಕಂ ನಿಗಮ ಕಚೇರಿ ಆವರಣದಲ್ಲಿ ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಸಾರ್ವಜನಿಕ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದು, ಬೆಸ್ಕಾಂ ಅಧಿಕಾರಿ ವರ್ಗದವರು ಹಾಗೂ ಸಿಬ್ಬಂದಿಗಳು ಅದ್ದೂರಿಯಾಗಿ ಆಚರಿಸಿದರು.





## 77ನೇ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಧ್ವಜಾರೋಹಣ ಕಾರ್ಯಕ್ರಮ

ಬೆಸ್ಕಾಂ ನಿಗಮ ಕಚೇರಿಯಲ್ಲಿ ಹಮ್ಮಿಕೊಂಡಿದ್ದ 77ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ಮಹಾಂತೇಶ ಬೀಳಗಿ** ಯವರು ಧ್ವಜಾರೋಹಣವನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಬೆಸ್ಕಾಂ ಹಣಕಾಸು ನಿರ್ದೇಶಕರಾದ **ಶ್ರೀ ದರ್ಶನ್. ಜೆ,** ತಾಂತ್ರಿಕ ನಿರ್ದೇಶಕರಾದ **ಶ್ರೀ ರಮೇಶ್ ಹೆಚ್.ಜೆ,** ಹಿರಿಯ ಪೊಲೀಸ್ ಅಧಿಕಾರಿಗಳು (ಜಾಗೃತದಳ), ಬೆ.ವಿ.ಕಂನ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಗೂ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.







## ವ್ಯವಸ್ಥಾಪಕ ನಿರ್ದೇಶಕರ ನುಡಿ



ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಬೆಸ್ಕಾಂನ ಎಲ್ಲಾ ಸಿಬ್ಬಂದಿಗಳಿಗೂ ಶುಭಾಶಯಗಳನ್ನು ತಿಳಿಸುತ್ತಾ, ಹಬ್ಬದ ಆಚರಣೆಯ ಸಮಯದಲ್ಲಿ ಯಾವುದೇ ವಿದ್ಯುತ್ ಅವಘಡಗಳಿಗೆ ಎಡೆಮಾಡಿಕೊಡದೆ, ಮುನ್ನೆಚ್ಚರಿಕಾ ಕ್ರಮಗಳನ್ನು ಅಗತ್ಯವಾಗಿ ಅನುಸರಿಸಿ ಹಬ್ಬವನ್ನು ಸುರಕ್ಷಿತವಾಗಿ ಆಚರಿಸಲು ಎಲ್ಲಾ ಸಿಬ್ಬಂದಿಗಳು ಎಚ್ಚರಿಕೆ ವಹಿಸುವುದು.

ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯಲು ಬರುವ ಸಂಘಟಕರು ಸೂಚಿಸುವ ಸ್ಥಳವನ್ನು ಪರಿಶೀಲಿಸಿ, ತಪಾಸಣೆ ನಡೆಸಬೇಕು. ವಿದ್ಯುತ್ ಕಂಬದಿಂದ ನೆಲದಡಿ (ಭೂಗತ ಕೇಬಲ್ ಮೂಲಕ) ವಿದ್ಯುತ್ ತಂದು ಓವರ್ ಹೆಡ್ ಮಾರ್ಗದಲ್ಲಿ ಎಳೆದು ವಿದ್ಯುತ್ ಸಂಪರ್ಕ ನೀಡಬೇಕು. ಹಾಗೂ ಗಣಪತಿ ಪ್ರತಿಷ್ಠಾಪನೆ ಸ್ಥಳದ ಸುತ್ತ ಯಾವುದೇ ಇ.ಎಚ್.ಟಿ/ಹೆಚ್.ಟಿ /ಎಲ್.ಟಿ ವಿದ್ಯುತ್ ಮಾರ್ಗ ಇರದ ಹಾಗೆ ನಮ್ಮ ಬೆಸ್ಕಾಂ ಸಂಸ್ಥೆಯ ಸಿಬ್ಬಂದಿಗಳು ಹೆಚ್ಚು ಗಮನಹರಿಸಬೇಕು.

ಸಾರ್ವಜನಿಕ ಸುರಕ್ಷತೆಯ ಜೊತೆಗೆ, ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಸಲು ದೇಶದಲ್ಲಿಯೇ ಮೊದಲ ಬಾರಿಗೆ ಬೆಸ್ಕಾಂ ವ್ಯಾಪ್ತಿಯಡಿ ೫೦೦ ಕೆವಿಎ ಸಾಮರ್ಥ್ಯದ ಭೂಗತ ಪರಿವರ್ತಕವನ್ನು ಅಳವಡಿಸಲು ಶ್ರಮವಹಿಸಿದ ಎಲ್ಲಾ ಸಿಬ್ಬಂದಿಗಳಿಗೂ ಈ ಮೂಲಕ ಅಭಿನಂದಿಸುತ್ತೇನೆ.

ಗೃಹ ಜ್ಯೋತಿ ಯೋಜನೆಯು ಬೆಸ್ಕಾಂ ವ್ಯಾಪ್ತಿಯ ೮ ಜಿಲ್ಲೆಗಳಲ್ಲಿ ಅನುಷ್ಠಾನಗೊಂಡಿದ್ದು, ಅಭೂತಪೂರ್ವ ಯಶಸ್ಸು ಕಂಡಿದೆ. ಇನ್ನೂ ಅರ್ಜಿ ಸಲ್ಲಿಸದೆ ಉಳಿದುಕೊಂಡಿರುವ ಫಲಾನುಭವಿಗಳು ಆದಷ್ಟು ಬೇಗ ಅರ್ಜಿ ಸಲ್ಲಿಸುವಂತೆ ನಮ್ಮ ಬೆಸ್ಕಾಂ ಸಿಬ್ಬಂದಿಗಳು ಅರಿವು ಮೂಡಿಸಬೇಕು. ಗ್ರಾಮೀಣ ಭಾಗದ ಗ್ರಾಹಕರಿಗೆ ಈ ಯೋಜನೆಯ ಕುರಿತು ಮಾಹಿತಿ ಒದಗಿಸುವುದರೊಂದಿಗೆ ಅವರನ್ನು ಯೋಜನೆಯಡಿ ನೋಂದಾಯಿಸುವ ಮೂಲಕ ಗೃಹ ಜ್ಯೋತಿ ಯೋಜನೆಯನ್ನು ಯಶಸ್ವಿಯಾಗಿಸೋಣ.

ವಂದನೆಗಳೊಂದಿಗೆ,

**ಮಹಾಂತೇಶ ಬೀಳಗಿ, ಭಾ.ಆ.ಸೇ.,**
ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ

## ತಾಂತ್ರಿಕ ನಿರ್ದೇಶಕರು ರವರ ಸಂದೇಶ

ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಅಪಘಾತಗಳು ಹೆಚ್ಚಾಗಿದ್ದು ಇಲಾಖೆಯ ಹಾಗೂ ಇಲಾಖೇತರ ವ್ಯಕ್ತಿಗಳಿಗೆ ಹೆಚ್ಚಿನ ಅನಾಹುತಗಳಾಗಿರುವುದು ತುಂಬಾ ಆತಂಕಾರಿ ವಿಷಯವಾಗಿರುತ್ತದೆ.



ಕಂಪನಿ ವತಿಯಿಂದ ಎಲ್ಲಾ ರೀತಿಯ ಸುರಕ್ಷತಾ ಸಾಮಗ್ರಿಗಳನ್ನು ಸಿಬ್ಬಂದಿಗೆ ನೀಡಲಾಗಿದ್ದು ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಲು ಹಾಗೂ ವಿದ್ಯುತ್ ಅಪಘಾತಗಳನ್ನು ತಪ್ಪಿಸಲು ಎಲ್ಲಾ ಸಿಬ್ಬಂದಿ ವರ್ಗ ಸೂಕ್ತ ಸುರಕ್ಷತಾ ಕ್ರಮಗಳನ್ನು ಪಾಲಿಸುವಂತೆ ತಿಳಿಸುತ್ತೇನೆ. ವಿದ್ಯುತ್ ಸುರಕ್ಷತೆ ನಮ್ಮ ಜವಾಬ್ದಾರಿಯೆ ಹೊರತು ಆಯ್ಕೆಯಲ್ಲ ಎಂಬ ಅಂಶವನ್ನು ಎಲ್ಲಾ ವರ್ಗದ ಸಿಬ್ಬಂದಿ ಮನಗಾಣಬೇಕು.

ಇದರ ಜೊತೆಯಲ್ಲಿ ಗ್ರಾಹಕರಿಗೆ ಉತ್ತಮ ಹಾಗೂ ನಿರಂತರ ವಿದ್ಯುತ್ ಪೂರೈಕೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುವುದರಿಂದ ವಿದ್ಯುತ್ ವಿತರಣಾ ಮಾರ್ಗಗಳ ನಿರ್ವಹಣೆಯನ್ನು ಕಾಲಕಾಲಕ್ಕೆ ಸರಿಯಾಗಿ ನಿರ್ವಹಿಸಿ ವಿದ್ಯುತ್ ಅಡಚಣೆಗಳ ಸಂಖ್ಯೆಯನ್ನು ಕಡಿಮೆ ಮಾಡಲು ಎಲ್ಲರೂ ಶ್ರಮವಹಿಸಿ ಕಾರ್ಯನಿರ್ವಹಿಸುವಂತೆ ಕೋರುತ್ತೇನೆ.

**ಹೆಚ್.ಜೆ. ರಮೇಶ್**
ನಿರ್ದೇಶಕರು (ತಾಂತ್ರಿಕ)

ಬೆವಿಕಂ
BESCOM

# ಗ್ರಾಹಕರ 'ಮನೆ' ಬೆಳಗಿದ ಗೃಹ ಜ್ಯೋತಿ




ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ **ಗೃಹ ಜ್ಯೋತಿ ಯೋಜನೆ**ಯು ಜಾರಿಗೊಂಡು ಇದೀಗ ರಾಜ್ಯದ್ಯಂತ ಜನರ ಮನೆ-ಮನಗಳನ್ನು ಬೆಳಗಿಸುವ ಮೂಲಕ ವಿದ್ಯುತ್ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನುಂಟು ಮಾಡಿದೆ.

ರಾಜ್ಯದ ಗೃಹಬಳಕೆ ಗ್ರಾಹಕರಿಗೆ ಮಾಸಿಕ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡುವ ಯೋಜನೆಯ ನೋಂದಣಿ ಪ್ರಕ್ರಿಯೆ ಮೇ 18 ರಿಂದ ಆರಂಭಗೊಂಡಿದ್ದು, ಜುಲೈ ತಿಂಗಳಿಂದ ರಾಜ್ಯದ್ಯಂತ ಯಶಸ್ವಿಯಾಗಿ ಅನುಷ್ಠಾನಗೊಂಡಿದೆ.

ಗ್ರಾಹಕರ ವಾರ್ಷಿಕ ವಿದ್ಯುತ್ ಬಳಕೆಯ ಸರಾಸರಿಯನ್ನು ಆಧಾರಿಸಿ 200 ಯೂನಿಟ್‌ಗಳಿಗಿಂತ ಕಡಿಮೆಯಿದ್ದಲ್ಲಿ ಸರಾಸರಿ ಬಳಕೆಯ ಮೇಲೆ ಶೇ.10 ರಷ್ಟು ಹೆಚ್ಚಿನ ಬಳಕೆ ಮಿತಿ ನಿಗದಿಪಡಿಸಿ ಈ ಯೋಜನೆಯ ಸೌಲಭ್ಯ ನೀಡಲಾಗುತ್ತಿದೆ. ಅಲ್ಲದೇ ಹೊಸದಾಗಿ ಗೃಹಬಳಕೆಯ ವಿದ್ಯುತ್ ಸಂಪರ್ಕ ಪಡೆದ ಗ್ರಾಹಕರಿಗೆ ರಾಜ್ಯದ ಒಟ್ಟು ಸರಾಸರಿ 53 ಯೂನಿಟ್ ಹಾಗೂ ಶೇ.10 ರಷ್ಟು ಹೆಚ್ಚುವರಿ ಯೂನಿಟ್ ನಿಗದಿಪಡಿಸಿ ಒಟ್ಟು 58 ಯೂನಿಟ್ ಉಚಿತ ವಿದ್ಯುತ್ ನೀಡಲಾಗುತ್ತಿದೆ.

ಈಗಾಗಲೇ ಈ ಯೋಜನೆಗೆ ಅರ್ಜಿ ಹಾಕಿರುವವರು ಮಾಸಿಕ ಸರಾಸರಿಯಂತೆಯೇ ವಿದ್ಯುತ್ ಬಳಕೆ ಮಾಡಿದ್ದರೆ, ಜುಲೈ ತಿಂಗಳಲ್ಲಿ ಬಳಸಿದ ವಿದ್ಯುತ್ ಪ್ರಮಾಣದ ಆಧಾರದ ಮೇಲೆ ಆಗಸ್ಟ್ ನಲ್ಲಿ ಶೂನ್ಯ ಬಿಲ್ ಮೊತ್ತ ನೀಡಲಾಗಿದೆ. ಗ್ರಾಹಕರು ಮಾಸಿಕ ಸರಾಸರಿಗಿಂತ ಹೆಚ್ಚುವರಿ ವಿದ್ಯುತ್ ಬಳಕೆ ಮಾಡಿದರೆ ಆ ಹೆಚ್ಚುವರಿ ಬಳಕೆ ಶುಲ್ಕ ಪಾವತಿಸಬೇಕಾಗುತ್ತದೆ.

**ದಾಖಲೆ ನೋಂದಣಿ:** ರಾಜ್ಯದ ಒಟ್ಟು 2.16 ಕೋಟಿ ಗೃಹಬಳಕೆಯ ಗ್ರಾಹಕರ ಪೈಕಿ ಆಗಸ್ಟ್ 31 ರವರೆಗೆ ಒಟ್ಟು 1.38 ಕೋಟಿ ಗ್ರಾಹಕರು ನೋಂದಾಯಿಸಿ-ಕೊಂಡಿದ್ದಾರೆ. ಭಾಗ್ಯಜ್ಯೋತಿ, ಕುಟೀರಜ್ಯೋತಿ ಹಾಗೂ ಅಮೃತಜ್ಯೋತಿ ಯೋಜನೆಗಳಡಿ ನೋಂದಾಯಿಸಿಕೊಂಡಿದ್ದ ಗ್ರಾಹಕರೆಲ್ಲರನ್ನು ಗೃಹ ಜ್ಯೋತಿ ಯೋಜನೆಗೆ ಸೇರಿಸಲಾಗಿದ್ದು, ಗ್ರಾಹಕರ ನೋಂದಣಿಯು ಒಟ್ಟು 1.58 ಕೋಟಿಗೆ ಏರಿಕೆಯಾಗಿದೆ. ಅಂದರೆ ನೋಂದಣಿಯಲ್ಲಿ ಶೇ.79.47 ರಷ್ಟು ಪ್ರಗತಿ ಸಾಧಿಸಿದೆ.

**1.34 ಕೋಟಿ ಗ್ರಾಹಕರಿಗೆ ಶೂನ್ಯ ಬಿಲ್:** ರಾಜ್ಯದಲ್ಲಿ 1.34 ಕೋಟಿ ಅರ್ಹ ಫಲಾನುಭವಿಗಳು ಯೋಜನೆಯ ಲಾಭವನ್ನು ಆಗಸ್ಟ್ ತಿಂಗಳಲ್ಲಿ ಪಡೆದಿದ್ದು, ಒಟ್ಟು 656 ಕೋಟಿ ರೂ. ಸಹಾಯಧನ ವ್ಯಯವಾಗಿದೆ. ಈ ಪೈಕಿ 95.34 ಲಕ್ಷ ಫಲಾನುಭವಿಗಳಿಗೆ ಶೂನ್ಯ ಬಿಲ್ ವಿತರಿಸಲಾಗಿದ್ದು, ಒಟ್ಟು 412.43 ಕೋಟಿ ರೂ. ಸಹಾಯ ಧನವನ್ನು ರಾಜ್ಯ ಸರ್ಕಾರ ಭರಿಸಿದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ಒಟ್ಟು 51.25 ಲಕ್ಷ ಅರ್ಹ ಫಲಾನುಭವಿಗಳು ಗೃಹ ಜ್ಯೋತಿ ಯೋಜನೆ ಪ್ರಯೋಜನವನ್ನು ಆಗಸ್ಟ್ ತಿಂಗಳಲ್ಲಿ ಪಡೆದಿದ್ದು, ಒಟ್ಟು 307 ಕೋಟಿ ಸಹಾಯಧನ ಭರಿಸಲಾಗಿದೆ. ಈ ಪೈಕಿ 33 ಲಕ್ಷ ಗ್ರಾಹಕರಿಗೆ ಶೂನ್ಯ ಬಿಲ್ ವಿತರಿಸಲಾಗಿದ್ದು, 180 ಕೋಟಿ ರೂ. ಸಹಾಯಧನ ವ್ಯಯವಾಗಿದೆ.

**ಉಚಿತ ವಿದ್ಯುತ್ ಪಡೆಯಲು ಯಾವುದೇ ಡೆಡ್ ಲೈನ್ ಇಲ್ಲ : ಗೃಹ ಜ್ಯೋತಿ ಯೋಜನೆ ನೋಂದಣಿಗೆ ಯಾವುದೇ ಗಡುವು ನಿಗದಿಪಡಿಸಿಲ್ಲ. ಈಗಲೂ ಸಹ ಯೋಜನೆಗೆ ಜನರು ನೋಂದಣಿ ಮಾಡಿಕೊಳ್ಳಬೇಕಿದೆ.** ಯೋಜನೆಗೆ ನೋಂದಣಿ ಮಾಡಿಕೊಳ್ಳುವ ಪ್ರಕ್ರಿಯೆಯು ತುಂಬಾ ಸರಳವಾಗಿದ್ದು ಗ್ರಾಹಕರು ಅನಾಗತ್ಯವಾಗಿ ಆತಂಕ ಪಡದೆ ಸೇವಾ ಸಿಂಧು ಪೋರ್ಟಲ್ **(https://sevasindhugs.karnataka.gov.in)** ಅಲ್ಲಿ ಖಾತೆ ಸಂಖ್ಯೆ, ಆಧಾರ್ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆಗಳನ್ನು ನಮೂದಿಸುವ ಮೂಲಕ ನೋಂದಣಿ ಮಾಡಿಕೊಳ್ಳಬಹುದು.





ಗೃಹ ಜ್ಯೋತಿ ಯೋಜನೆ ಬಹಳ ಯಶಸ್ವಿಯಾಗಿ ಬೆಸ್ಕಾಂನ 8 ಜಿಲ್ಲೆಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಂಡಿದ್ದು, ಇದುವರೆಗೆ ಒಟ್ಟು 51.25 ಲಕ್ಷ ಗ್ರಾಹಕರು ಆಗಸ್ಟ್ ತಿಂಗಳಲ್ಲಿ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಯೋಜನೆ ವ್ಯಾಪ್ತಿಯಿಂದ ಹೊರಗುಳಿದಿರುವ ಗ್ರಾಮೀಣ ಭಾಗದ ಗ್ರಾಹಕರನ್ನು ನೋಂದಾಯಿಸಿಕೊಳ್ಳಲು ನಮ್ಮ ಸಿಬ್ಬಂದಿ ಅಗತ್ಯ ಅರಿವು ಮೂಡಿಸಬೇಕು.

**– ಮಹಾಂತೇಶ ಬೀಳಗಿ, ಭಾ.ಆ.ಸೇ.**
ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ

## ಫಲಾನುಭವಿಗಳ ಅನಿಸಿಕೆ



ನಮ್ಮದು ಅವಿಭಕ್ತ ಕುಟುಂಬವಾಗಿದ್ದು, ತಿಂಗಳಿಗೆ ಒಂದು ಸಾವಿರ ರೂ. ವರೆಗೂ ಆಸುಪಾಸು ಕರೆಂಟ್ ಬಿಲ್ ಬರುತ್ತಿತ್ತು. ಗೃಹಜ್ಯೋತಿ ಯೋಜನೆಯಿಂದ ಜುಲೈ ಮತ್ತು ಆಗಸ್ಟ್ ತಿಂಗಳ ಕರೆಂಟ್ ಬಿಲ್ ಶೂನ್ಯ ಬಂದಿದೆ. ಇದರಿಂದ ತುಂಬಾ ಅನುಕೂಲವಾಗಿದೆ. ಉಳಿತಾಯವಾದ ಹಣದಿಂದ ಮನೆಗೆ ಬೇಕಾದ ಅಗತ್ಯ ಸಾಮಾಗ್ರಿ ಖರೀದಿಸಲು ಸಹಾಯವಾಗಿದೆ.

– **ಉಮೇಶ,** ಚಿಕ್ಕನಾಯಕನಹಳ್ಳಿ, ತುಮಕೂರು



ಬಾಡಿಗೆದಾರರಾದ ನಮಗೆ ಕಳೆದ ಎರಡು ತಿಂಗಳಿಂದ ಶೂನ್ಯ ಬಿಲ್ ಬರುತ್ತಿದ್ದು, ಗೃಹ ಜ್ಯೋತಿ ಯೋಜನೆಯಿಂದ ತುಂಬಾ ಅನುಕೂಲವಾಗಿದೆ. ಮಾಸಿಕ 500 ರಿಂದ 600 ರೂ.ಗಳು ಕರೆಂಟ್ ಬಿಲ್‌ಗೆ ವ್ಯಯವಾಗುತ್ತಿತ್ತು. ಇದೀಗ ಈ ಹಣ ಮಕ್ಕಳ ಶಾಲಾ ವೆಚ್ಚ ಸೇರಿದಂತೆ ಮನೆಗೆ ಸಂಬಂಧಿಸಿದ ಚಿಕ್ಕಪುಟ್ಟ ಖರ್ಚಿಗೆ ಸಹಾಯವಾಗುತ್ತಿದೆ.

– **ಶೋಭ,** ಚಂದ್ರಲೇಔಟ್, ಬೆಂಗಳೂರು



ಗೃಹ ಜ್ಯೋತಿ ಯೋಜನೆಯಡಿ ಭಾಗ್ಯಜ್ಯೋತಿ ಫಲಾನುಭವಿಗಳನ್ನು ವಿಲೀನಗೊಳಿಸಿರುವುದು ಖುಷಿಯಾಗಿದೆ. ಈ ಮೊದಲು 40 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡಲಾಗುತ್ತಿತ್ತು. ಈಗ ರಾಜ್ಯದ ಸರಾಸರಿ ವಿದ್ಯುತ್ ಬಳಕೆಯಾದ 53 ಯೂನಿಟ್ ಹಾಗೂ ಶೇ.10 ರಷ್ಟು ಹೆಚ್ಚುವರಿ ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡಲಾಗುತ್ತಿದೆ. ಇದರಿಂದ ನಮ್ಮಂತ ಮಧ್ಯಮ ವರ್ಗದವರಿಗೆ ಹೆಚ್ಚು ಲಾಭತಂದಿದೆ.

– **ರಾಮಣ್ಣ ಜಿ.,** ಹೊಸದುರ್ಗ ತಾ||, ಚಿತ್ರದುರ್ಗ ಜಿಲ್ಲೆ.



ಗೃಹ ಜ್ಯೋತಿ ಜಾರಿಯಾಗುವ ಮೊದಲು ಸುಮಾರು 600 ರಿಂದ 800 ರೂ. ವರೆಗೆ ಕರೆಂಟ್ ಬಿಲ್ ಬರುತ್ತಿತ್ತು. ಆದರೆ ಕಳೆದ ಎರಡು ತಿಂಗಳಿಂದ ವಿದ್ಯುತ್ ಬಿಲ್ ಶೂನ್ಯ ಬರುತ್ತಿದ್ದು, ಕಣ್ಣಿಗೆ ಕಾಣದೆ ವ್ಯಯವಾಗುತ್ತಿದ್ದ ಖರ್ಚುಗಳಿಗೆ ಸರಿದೂಗಿಸಲಾಗುತ್ತಿದೆ.

– **ಸರಸ್ವತಿ,** ನಂದಿನಿ ಲೇಔಟ್, ಬೆಂಗಳೂರು

# ದೇಶದಲ್ಲೇ ಮೊದಲ ಭಾರಿಗೆ ಬೆಸ್ಕಾಂನಿಂದ ಭೂಗತ ವಿದ್ಯುತ್ ಪರಿವರ್ತಕ ಕಾರ್ಯಾರಂಭ



ಜನ-ಜಾನುವಾರುಗಳನ್ನು ವಿದ್ಯುತ್ ಅವಘಡಗಳಿಂದ ತಪ್ಪಿಸುವುದು ಸೇರಿ ಪಾದಚಾರಿ ಮಾರ್ಗಗಳಲ್ಲಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸುವ ಕಾರ್ಯಕ್ಕೆ ಗುಡ್ ಬೈ ಹೇಳಿದ್ದು, ದೇಶದಲ್ಲಿಯೇ ಮೊದಲ ಬಾರಿಗೆ ಬೆಂಗಳೂರಿನ ಮಲ್ಲೇಶ್ವರಂ ವಿಭಾಗದಲ್ಲಿ 500 ಕೆವಿಎ ಸಾಮರ್ಥ್ಯದ ಭೂಗತ ವಿದ್ಯುತ್ ಪರಿವರ್ತಕವು ಕಾರ್ಯಾರಂಭ ಗೊಂಡಿದೆ.

ಬೆಸ್ಕಾಂ ಹಾಗೂ ಬಿಬಿಎಂಪಿ ಸಹಭಾಗಿತ್ವದಲ್ಲಿ ಒಟ್ಟು 1.97 ಕೋಟಿ ವೆಚ್ಚದಲ್ಲಿ ಈ ಪರಿವರ್ತಕ ಕೇಂದ್ರವನ್ನು (ಟಿಸಿ) ನಿರ್ಮಿಸಲಾಗಿದ್ದು, ಈ ಕೇಂದ್ರದ ಉದ್ದ 14 ಮೀಟರ್, ಅಗಲ 5 ಮೀಟರ್ ಹಾಗೂ ಆಳ 4 ಮೀಟರ್‌ಗಳಷ್ಟಿದೆ.

ಅಲ್ಲದೇ ಈ ಯೋಜನೆಯಡಿ ವಿತರಣ ಪರಿವರ್ತಕ-ಗಳು 'ರಿಂಗ್ ಮೇನ್ ಯೂನಿಟ್'ಗಳು, ಫಿಡರ್ ಪಿಲ್ಲರ್ ಬಾಕ್ಸ್‌ಗಳು ಸೇರಿದಂತೆ ಸಂಪೂರ್ಣ ವ್ಯವಸ್ಥೆಯನ್ನು ಭೂಗತವಾಗಿ ಪರಿವರ್ತಿಸಲಾಗುತ್ತಿದ್ದು, ಇದರಿಂದ ವಿದ್ಯುತ್ ಅವಘಡಗಳನ್ನು ತಪ್ಪಿಸುವುದರ ಜೊತೆಗೆ ಪೂರೈಕೆ ವೇಳೆ ಸಂಭವಿಸುತ್ತಿದ್ದ ವಿದ್ಯುತ್ ನಷ್ಟವನ್ನು ತಗ್ಗಿಸಬಹುದಾಗಿದೆ. ಗುಣಮಟ್ಟದ ವಿದ್ಯುತ್ ಪೂರೈಸಲು ಸಾಧ್ಯವಾಗುತ್ತಿದೆ.

ಪಾದಚಾರಿ ಮಾರ್ಗದ ನಾಲ್ಕು ಮೀಟರ್ ಅಡಿ ಆಳದಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಲಾಗಿದೆ. ಈ ವ್ಯವಸ್ಥೆಗೆ ಹೆಚ್ಚಿನ ಜಾಗದ ಅಗತ್ಯವಿಲ್ಲ. ಕಡಿಮೆ ಜಾಗದಲ್ಲಿ ಸುರಕ್ಷವಾಗಿರುವ ವ್ಯವಸ್ಥೆ ಇದಾಗಿದೆ. ಅಗ್ನಿ ದುರಂತಗಳು ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜೊತೆಗೆ ಗಾಳಿ ವ್ಯವಸ್ಥೆಯು ಇದೆ. ನೀರಿನ ಸಂಪು ಮಾದರಿಯಲ್ಲಿ ದಪ್ಪನೆಯ ಕಾಂಕ್ರಿಟ್‌ನ ನಾಲ್ಕು ಗೋಡೆಗಳನ್ನು ನಿರ್ಮಿಸಿ ವಿದ್ಯುತ್ ಪರಿವರ್ತಕ ಸ್ಥಾಪಿಸಲಾಗಿದೆ. ಇಲ್ಲಿ ಸ್ಲ್ಯಾಬ್ ಹಾಕಿರುವುದರಿಂದ ನಾಗರೀಕರು ಯಾವುದೇ ತೊಂದರೆ ಇಲ್ಲದೆ ಪಾದಚಾರಿ ರಸ್ತೆ ಮೇಲೆ ನಡೆದಾಡಬಹುದಾಗಿದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ಮುಂಬರುವ ದಿನಗಳಲ್ಲಿ ಭೂಗತ ವಿದ್ಯುತ್ ಪರಿವರ್ತಕಗಳ ಅಳವಡಿಕೆಯ ವಿಧಾನಕ್ಕೆ ಒತ್ತು ನೀಡಲಾಗುವುದು. ಸುಮಾರು 300 ಟ್ರಾನ್ಸ್‌ಫಾರ್ಮರ್-ಗಳನ್ನು ಸ್ಥಳಾಂತರ ಮಾಡಬೇಕಿದೆ. ಇವೆಲ್ಲವುಗಳನ್ನು ನೆಲದಡಿ ನಿರ್ಮಿಸಲು ಕಷ್ಟ ಸಾಧ್ಯ. ಆದರೂ ಕೆಲವು ಪರಿವರ್ತಕ ಉಪಕೇಂದ್ರಗಳನ್ನು ನೆಲದಡಿ ನಿರ್ಮಿಸಲು ಇಂಧನ ಇಲಾಖೆ ಚಿಂತನೆ ನಡೆಸಿದೆ.

### ಈ ಕೇಂದ್ರಕ್ಕೆ ತಗುಲಿರುವ ವೆಚ್ಚದ ವಿವರ :

ಬೆಸ್ಕಾಂ 1.33 ಕೋಟಿ ರೂ. ವೆಚ್ಚದಲ್ಲಿ 500 ಕೆವಿಎ ತೈಲರಹಿತ ಪರಿವರ್ತಕ, 8 ವೇ ಸಾಲಿಡ್ ಸ್ಟೇಟ್‌ರಿಂಗ್ ಮೈನ್ ಯುನಿಟ್, 5 ವೇ ಎಲ್.ಟಿ. ವಿತರಣಾ ಪೆಟ್ಟಿಗೆ, 2 ಕೆವಿಎ ಯುಪಿಎಸ್, 1 ಹೆಚ್.ಪಿ ವಾಟರ್ ಪಂಪ್ (ಸ್ವಯಂಚಾಲಿತ), ಹವಾ ನಿಯಂತ್ರಣ ವ್ಯವಸ್ಥೆ (ಸ್ವಯಾಂಚಾಲಿತ), ವಿದ್ಯುತ್ ದೀಪಗಳು, ಅಗ್ನಿಶಾಮಕ ಉಪಕರಣಗಳು ಸೇರಿದಂತೆ ಭೂಗತ ಪರಿವರ್ತಕ ಕೇಂದ್ರಕ್ಕೆ ಅವಶ್ಯವಿರುವ ಎಲ್ಲಾ ವಿದ್ಯುತ್ ಉಪಕರಣಗಳನ್ನು ಅಳವಡಿಸಲಾಗುತ್ತಿದೆ. ಹಾಗೂ ಈ ಯೋಜನೆಗೆ

ಸಂಬಂಧಿಸಿದಂತೆ ಬಿಬಿಎಂಪಿ 64 ಲಕ್ಷ ರೂ.ಗಳ ವೆಚ್ಚದಲ್ಲಿ ಸಂಪೂರ್ಣ ಸಿವಿಲ್ ಕಾಮಗಾರಿಯನ್ನು ತೆಗೆದುಕೊಂಡಿದೆ.



### ಕಾರ್ಯನಿರ್ವಹಣೆ ಹೇಗೆ ?

ಇದು ತೈಲ ರಹಿತ ಪರಿವರ್ತಕ ವಾಗಿದ್ದು, 'ಡ್ರೈ' ಬ್ಯಾಟರಿಗಳನ್ನು ಅಳವಡಿಸಲಾಗಿದೆ. ಹೀಗಾಗಿ ಹೆಚ್ಚು ಸುರಕ್ಷಿತವಾಗಿದೆ. ನೆಲದ ಮೇಲೆ ಸಾಮಾನ್ಯವಾಗಿ ಅಳವಡಿಸುವ ವಿದ್ಯುತ್ ಪರಿವರ್ತಕಕ್ಕೆ ತೈಲ ಬಳಸಲಾಗುತ್ತದೆ. ತೈಲ ಸೋರಿಕೆಯಾಗಿ ಬೆಂಕಿ ಅವಘಡಗಳು ಸಂಭವಿಸುವ ಸಾಧ್ಯತೆಗಳಿರುತ್ತವೆ. ಆದರೆ, ಇಲ್ಲಿ ಅಂತಹ ಅವಘಡಗಳು ಸಂಭವಿಸುವುದು ಬಹಳ ವಿರಳ.

ವಿದ್ಯುತ್ ಪರಿವರ್ತಕವು ಸಂಪೂರ್ಣವಾಗಿ ತಾಪಮಾನ ನಿಯಂತ್ರಿತ ವ್ಯವಸ್ಥೆಯನ್ನು ಹೊಂದಿದೆ. ಪರಿವರ್ತಕ ಇರುವ ಸ್ಥಳದಲ್ಲಿ ತಾಪಮಾನ ಹೆಚ್ಚಾಗದ ರೀತಿಯ ತಂತ್ರಜ್ಞಾನ ಅಳವಡಿಸಲಾಗಿದೆ. 40 ಡಿಗ್ರಿ ತಾಪಮಾನ ಮೀರಿದರೆ ಸಿಬ್ಬಂದಿಗೆ ಎಚ್ಚರಿಕೆ ಸಂದೇಶವನ್ನು ರವಾನಿಸುವ ವ್ಯವಸ್ಥೆ ಮಾಡಲಾಗಿದೆ. ಒಂದು ವೇಳೆ ನೀರು ಸಂಗ್ರಹವಾದರೆ ಸ್ವಯಂಚಾಲಿತವಾಗಿ ಹೊರಗೆ ಹಾಕಲು 1 ಎಚ್.ಪಿ ವಾಟರ್ ಪಂಪ್ ಅಳವಡಿಸಲಾಗಿದೆ.

### ವಿಶೇಷತೆ ಏನು ?

- ಸಾಮಾನ್ಯ ಪರಿವರ್ತಕಗಳನ್ನು ಡಬಲ್ ಪೋಲ್ ಅಥವಾ ಸ್ವನ್‌ಪೋಲ್' ಗಳ ಮೇಲೆ ಅಳವಡಿಸಲಾಗಿದೆ. ಆದರೆ, ಹೊಸ ಪದ್ಧತಿಯಲ್ಲಿ ಪರಿವರ್ತಕ ಮತ್ತು ಆರ್.ಎಂ.ಯು ಗಳನ್ನು ಪೂರ್ಣವಾಗಿ ನೆಲದಡಿ ಬರುತ್ತದೆ.
- ಕಂಬಗಳ ಮೇಲೆ ಅಳವಡಿಸಿರುವ ಪರಿವರ್ತಕಗಳು ಆಯಿಲ್ (ತೈಲ) ಟೈಪ್ ಪರಿವರ್ತಕಗಳಾಗಿರುತ್ತದೆ. ಇದು 500 ಕೆವಿಎ ತೈಲ ರಹಿತ ಡ್ರೈಟೈಪ್ ಪರಿವರ್ತಕವಾಗಿದೆ.
- ಹೊಸ ವ್ಯವಸ್ಥೆಯಿಂದ ಅಗ್ನಿ ಅವಘಡ ತಪ್ಪಿಸಬಹುದಾಗಿದೆ. ಭೂಗತ ಪ್ರದೇಶದಲ್ಲಿ ಅಲ್ಲಿನ ಯಂತ್ರಗಳು ಕಾರ್ಯನಿರ್ವಹಿಸುವ ವೇಳೆ ಬಿಸಿಯಾಗದಂತೆ ತಾಪಮಾನ ನಿಯಂತ್ರಿತ ಮತ್ತು ಹವಾನಿಯಂತ್ರಿತ ವ್ಯವಸ್ಥೆ ಕಲ್ಪಿಸಲಾಗಿದೆ.
- ಒಂದು ವೇಳೆ ಮಳೆಯಾದಂತ ಸಮಯದಲ್ಲಿ ನೀರು ಸೋರಿದರೆ ಅದನ್ನು ಹೊರಗೆ ಹಾಕಲು ಸ್ವಯಂಚಾಲಿತ 1 ಎಚ್.ಪಿ. ವಾಟರ್ ಪಂಪ್, 2 ಕೆವಿಎ ಯುಪಿಎಸ್, ವಿದ್ಯುತ್ ದೀಪಗಳು, ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಲಾಗಿದೆ.

**ಪ್ರಯೋಜನಗಳು :**

- ಹೆಚ್ಚು ಸುರಕ್ಷಿತ, ಅತಿ ಕಡಿಮೆ ಜಾಗದಲ್ಲಿ ನಿರ್ಮಾಣ.
- ಯಾವುದೇ ರೀತಿಯ ಹವಮಾನ ವೈಪರಿತ್ಯ ಸ್ಥಿತಿಯನ್ನು ಎದುರಿಸಲು ಸಾಧ್ಯ.
- ನೆಲದಡಿಯಲ್ಲಿ ಇರುವುದರಿಂದ ನಗರ ಸೌಂದರ್ಯ ಕಾಪಾಡಲು ಅನುಕೂಲ.

**ಸವಾಲುಗಳು :**

- ಸಿಬ್ಬಂದಿ ಮತ್ತು ಉಪಕರಣಗಳ ಸುರಕ್ಷತೆ.
- ಸಮರ್ಪಕ ತಾಪಮಾನ ಮತ್ತು ಗಾಳಿ ವ್ಯವಸ್ಥೆ ಒದಗಿಸುವಿಕೆ.
- ಅಗ್ನಿ ಮತ್ತು ಚರಂಡಿ ವ್ಯವಸ್ಥೆ ನಿಯಂತ್ರಣ.

**ಉಪಕರಣಗಳು :**

- 500 ಕೆವಿಎ ಡ್ರೈಮಾದರಿ ಪರಿವರ್ತಕ.
- 11 ಕೆವಿ ನೆಲದಡಿಯಲ್ಲಿನ ಕೇಬಲ್‌ಗಳು.
- ಎಫ್.ಆರ್.ಸಿ. ಬ್ಯಾಟರಿಗಳೊಂದಿಗೆ 2 ಕೆವಿಎ ಯುಪಿಎಸ್.

# ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ (FPPCA) ಎಂದರೇನು ?

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ **ಗೃಹ ಜ್ಯೋತಿ** ಯೋಜನೆ ಅನುಷ್ಠಾನಗೊಂಡ ನಂತರ ಗ್ರಾಹಕರ ಚಿತ್ತ ಇದೀಗ ವಿದ್ಯುತ್ ಬಿಲ್ ನ ಮೇಲೆ ನೆಟ್ಟಿದೆ. ವಿದ್ಯುತ್ ಬಿಲ್ ನಲ್ಲಿರುವ ಪ್ರತಿಯೊಂದು ಕಾಲಂಗಳನ್ನು ಈಗ ಕೂಲಂಕುಷವಾಗಿ ಪರಿಶೀಲಿಸುತ್ತಿದ್ದಾರೆ. ವಿದ್ಯುತ್ ಬಿಲ್ ನಲ್ಲಿ ನಮೂದಿಸಿರುವ FPPCA ಶುಲ್ಕದ ಕುರಿತು ಗ್ರಾಹಕರಲ್ಲಿರುವ ಗೊಂದಲಗಳನ್ನು ಪರಿಹರಿಸುವ ನಿಟ್ಟಿನಲ್ಲಿ **FPPCA ಎಂದರೇನು?** ಈ ಶುಲ್ಕವನ್ನು ಏಕೆ ಗ್ರಾಹಕರಿಗೆ ವಿಧಿಸಲಾಗುತ್ತದೆ ಎಂಬ ವಿವರಣೆ ಈ ಲೇಖನದಲ್ಲಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (KERC) ಜಾರಿಗೊಳಿಸುವ ವಿದ್ಯುತ್‌ದರ ಪರಿಷ್ಕರಣೆಗೂ ಮತ್ತು ಎಸ್ಕಾಂಗಳು ವಿದ್ಯುತ್ ಉತ್ಪಾದಕರಿಂದ ಖರೀದಿಸುವ ವಿದ್ಯುತ್ ಮೇಲಿನ ಇಂಧನ ವೆಚ್ಚದಲ್ಲಿನ ಬೆಲೆಯಲ್ಲಿ ವ್ಯತ್ಯಾಸ ಉಂಟಾಗುವುದರಿಂದ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಶುಲ್ಕ (FPPCA) ವನ್ನು ವಿಧಿಸಲು KERC ಎಲ್ಲಾ ಎಸ್ಕಾಂ ಗಳಿಗೆ ಅನುಮತಿ ನೀಡಿರುತ್ತದೆ.

2013 ರಿಂದ ಇಂಧನ ಹೊಂದಾಣಿಕೆ ಶುಲ್ಕ (FAC) ವ್ಯವಸ್ಥೆ ಜಾರಿಯಲ್ಲಿತ್ತು. ಅಂದಿನಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಮಾತ್ರ FAC ಪರಿಷ್ಕರಣೆಯಾಗುತ್ತಿತ್ತು. ಆದರೆ, ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (KERC) ಅಕ್ಟೋಬರ್ 21, 2022 ರಲ್ಲಿ ತನ್ನ ನಿಯಮಗಳನ್ವಯ ಇಂಧನ ಹೊಂದಾಣಿಕೆ ಶುಲ್ಕ (FAC) ಅನ್ನು FPPCA (ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಶುಲ್ಕಗಳು) ಎಂದು ಬದಲಿಸಿ ಅಧಿಸೂಚನೆ ಹೊರಡಿಸಿದೆ.

ನಂತರದಲ್ಲಿ ಡಿಸೆಂಬರ್ 29, 2022 ರಂದು ಕೇಂದ್ರ ವಿದ್ಯುತ್ ಸಚಿವಾಲಯ ಪರಿಚಯಿಸಿದ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚದ ಹೊಂದಾಣಿಕೆಯನ್ನು KERC ಫೆಬ್ರವರಿ 23, 2023 ರಂದು ಅಧಿಸೂಚನೆ ಹೊರಡಿಸಿ ಎಲ್ಲಾ ಎಸ್ಕಾಂಗಳು ಪ್ರತಿ ತಿಂಗಳು ಗ್ರಾಹಕರಿಂದ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ ಶುಲ್ಕವನ್ನು (FPPCA) ವಸೂಲಿ ಮಾಡಬೇಕು ಎನ್ನುವ ಸ್ಪಷ್ಟ ನಿರ್ದೇಶನ ನೀಡಿತು. ಇಂಧನದ ಜತೆಗೆ ವಿದ್ಯುತ್ ಪ್ರಸರಣ ಸೇರಿದಂತೆ ವಿವಿಧ ವೆಚ್ಚವನ್ನು ಸಹ ಭರಿಸಬೇಕು ಎನ್ನುವ ಸೂಚನೆ ನೀಡಲಾಗಿತ್ತು. ಹೀಗಾಗಿಯೇ, ಹೆಚ್ಚುವರಿ ಹೊರೆಯನ್ನು ಗ್ರಾಹಕರಿಂದ FPPCA ಸಂಗ್ರಹಿಸುವ ಅಥವಾ ಕಡಿತಗೊಳಿಸುವ ಪ್ರಕ್ರಿಯೆಯನ್ನು ಎಸ್ಕಾಂಗಳು ಆರಂಭಿಸಿವೆ.

ಈ ನಿಯಮಕ್ಕೆ ಬದ್ಧವಾಗಿಯೇ ರಾಜ್ಯದಲ್ಲಿನ ಎಸ್ಕಾಂಗಳು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (KERC) ನಿರ್ದೇಶನದಂತೆ ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ (FPPCA) ಶುಲ್ಕವನ್ನಾಗಿ ಪಡೆಯುತ್ತವೆ.

ಕೇಂದ್ರ ವಿದ್ಯುತ್ ಸಚಿವಾಲಯ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (KERC) ಕಾಲಕಾಲಕ್ಕೆ ಕೈಗೊಂಡ ಆದೇಶ ಮತ್ತು ನಿಯಮಾನುಸಾರ ವಾಸ್ತವ ಸಂಗತಿಯ ಮೇಲೆ ಬೆಳಕು ಚೆಲ್ಲುತ್ತವೆ. ಉದಾಹರಣೆಗೆ, ದೇಶಿಯವಾಗಿ ಖರೀದಿಸುವ ಕಲ್ಲಿದ್ದಲು ಪ್ರತಿ ಮೆಟ್ರಿಕ್‌ಟನ್‌ಗೆ ಅಂದಾಜು ರೂ.5 ಸಾವಿರಕ್ಕೆ ಲಭ್ಯವಿದ್ದರೆ, ಆಮದು ಮಾಡಿಕೊಳ್ಳುವ ಕಲ್ಲಿದ್ದಲು ಅದೇ ಹೊತ್ತಿಗೆ ರೂ.15 ಸಾವಿರದಷ್ಟಿರುತ್ತದೆ. ಹಲವು ಬಾರಿ ಈ ದರ ಏರುಪೇರಾಗುತ್ತದೆ.



ಕೇಂದ್ರದ ಸೂಚನೆ ಮೇರೆಗೆ ಮಾರ್ಚ್ ತಿಂಗಳಿಂದ ಪರಿಷ್ಕರಿಸಿದ FPPCA ಶುಲ್ಕವನ್ನು ಪ್ರತಿ ತಿಂಗಳು ಗ್ರಾಹಕರಿಂದ ಎಲ್ಲಾ ಎಸ್ಕಾಂಗಳು ಸಂಗ್ರಹಿಸುತ್ತಿವೆ. ಇಂಧನ ವೆಚ್ಚದಲ್ಲಿ ವ್ಯತ್ಯಾಸವಾದಂತೆ FPPCA ನಲ್ಲೂ ಏರಿಳಿಕೆಯಾಗುತ್ತದೆ. ವಿದ್ಯುತ್ ದರದಲ್ಲಿ ಕೆಲವು ಬಾರಿ ವ್ಯತ್ಯಾಸ ಕಂಡುಬಂದರೆ, ಕೆಲವು ಬಾರಿ ಮರುಪಾವತಿ- ಯಾಗುತ್ತದೆ.

2023ರ ಮಾರ್ಚ್ ನಲ್ಲಿ ಒಂದು ಯೂನಿಟ್‌ಗೆ 59 ಪೈಸೆ, ಏಪ್ರಿಲ್ ನಲ್ಲಿ 90 ಪೈಸೆ, ಮೇ ತಿಂಗಳಲ್ಲಿ 1.60 ಪೈಸೆ, ಜೂನ್ ತಿಂಗಳಲ್ಲಿ 27 ಪೈಸೆ, ಜುಲೈ ತಿಂಗಳಲ್ಲಿ–6 ಪೈಸೆ, ಆಗಸ್ಟ್ 9 ಪೈಸೆ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ 28 ಪೈಸೆ ಅನ್ನು ಗ್ರಾಹಕರ ಬಿಲ್ ಗೆ ಸೇರಿಸಲೇಬೇಕಾಗಿತ್ತು.

ಇನ್ನೂ ಗೃಹಬಳಕೆ ಜಕಾತಿಯಡಿ (Domestic tariff) ಈ ಮೊದಲು ನಾಲ್ಕು ಸ್ಲ್ಯಾಬ್‌ಗಳಿದ್ದವು. ಅದನ್ನು KERC ಎರಡು ಸ್ಲ್ಯಾಬ್ ಗೆ ಬದಲಿಸಿತು. ಇದರನ್ವಯ ವಿದ್ಯುತ್ ಶುಲ್ಕ ದರ ಪಟ್ಟಿಯನ್ನು ಈ ಕೆಳಗೆ ನಮೂದಿಸಲಾಗಿದೆ.

ಪ್ರತಿ ನವೆಂಬರ್ ನಲ್ಲಿ ವಿದ್ಯುತ್‌ದರ ಪರಿಷ್ಕರಣೆಗೆ

| ಹಳೆ ವಿದ್ಯುತ್ ಶುಲ್ಕ ದರ ಪಟ್ಟಿ | | ಹೊಸ ವಿದ್ಯುತ್ ಶುಲ್ಕ ದರ ಪಟ್ಟಿ | |
|---|---|---|---|
| In Unit | In Rupee's | In Unit | In Rupee's |
| 0-50 Unit | 4.15 Rs. | 0-100 Unit | 4.75 Rs. |
| 50 to 100 Unit | 5.60 Rs. | 101 Unit and more | Per every unit it charges 7 Rs. |
| 100 to 200 Unit | 7.15 Rs. | | |
| 250 Unit and more | 8.20 Rs. | | |

ಸಂಬಂಧಿಸಿದಂತೆ ಎಲ್ಲ ಎಸ್ಕಾಂಗಳು ಪ್ರಸ್ತಾವನೆಗಳನ್ನು ಸಲ್ಲಿಸುತ್ತವೆ. ನಂತರ ಗ್ರಾಹಕರು, ಉದ್ಯಮಿಗಳು ಸೇರಿದಂತೆ ಎಲ್ಲಾ ಗೃಹ ಬಳಕೆದಾರರು ವಿವಿಧ ವಲಯದ ಎಲ್ಲಾ ಗ್ರಾಹಕರ ಅಭಿಪ್ರಾಯಗಳನ್ನು KERC ಪಡೆಯುತ್ತದೆ. ತದನಂತರ, ಅದು ನೀಡುವ ಆದೇಶವನ್ನು ಎಲ್ಲಾ ಎಸ್ಕಾಂಗಳು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ.

ಸೆಕ್ಷನ್ 111ರ ಅಡಿಯಲ್ಲಿ ವಿದ್ಯುತ್ ದರ ಪರಿಷ್ಕರಣೆಯನ್ನು ಪ್ರಶ್ನಿಸಿ ನ್ಯಾಯ ಮಂಡಳಿಯಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಯಾವುದೇ ಹೈಕೋರ್ಟ್ ಅಥವಾ ಸುಪ್ರೀಂಕೋರ್ಟ್ ನಲ್ಲೂ ಅರ್ಜಿ ಹಾಕಲು ಅವಕಾಶ ಇರುವುದಿಲ್ಲ.

# ಇವಿ ಕುರಿತು ಜಾಗೃತಿ ಮೂಡಿಸಿದ ಬೆಸ್ಕಾಂ ಸಿಬ್ಬಂದಿ

## ಲೇಹ್-ಲಡಾಕ್ ಕಣಿವೆಯಲ್ಲಿ ಬೈಕ್ ಪ್ರವಾಸ

ಹೋರಾಟ, ಕಲಿಕೆ, ಕೆಲವು ಕಠಿಣ ಆಯ್ಕೆಗಳು ಮತ್ತು ನಿರ್ಧಾರಗಳು, ಸವಾಲುಗಳು, ಹೊಸ ಹೊಸ ಜನರು, ಮನಸ್ಸಿಗೆ ಮುದ ನೀಡುವ ಭೂದೃಶ್ಯಗಳು, ಎದುರಾಗುವ ಭಾರತದ ಪ್ರಮುಖ ನದಿಗಳು ಮತ್ತು ಪ್ರಕೃತಿ ಅಬ್ಬಾ !! ಪುಸ್ತಕಗಳಲ್ಲಿ ಓದಿ ಕಲ್ಪಿಸಿಕೊಳ್ಳುತ್ತಿದ್ದದೆಲ್ಲವೂ ಒಮ್ಮೆ ಕಣ್ಣ ಮುಂದೆ ಕಾಣುವುದಿದೆಯಲ್ಲ, ಜೀವಮಾನವಿಡಿ ಮರೆಯಲಾಗದ ಅದ್ಭುತ ಕ್ಷಣಗಳು.

ಬೈಕ್ ಕ್ರೇಜ್ ಇರುವ ಬಹುತೇಕರಿಗೆ ದೂರದ ಊರುಗಳಿಗೆ ಪ್ರವಾಸ ಕೈಗೊಳ್ಳುವ ಹಂಬಲ ಇರುತ್ತದೆ. ಅದರಲ್ಲೂ ಲೇಹ್, ಲಡಾಕ್ ನಂತಹ ಸಾಹಸಿ ಪ್ರದೇಶಗಳಿಗೆ ತೆರಳಲು ಅದೆಷ್ಟೋ ಜನ ಎದುರು ನೋಡುತ್ತಿರುತ್ತಾರೆ. ಹೀಗೆ ಏಕಾಂಗಿಯಾಗಿ ಬೈಕ್‌ರೈಡ್ ಹೋಗಬೇಕೆಂದು ಹಂಬಲಿಸುತ್ತಿದ್ದ ಬೆಸ್ಕಾಂ ನ ಸಹಾಯಕ, ಪ್ರಧಾನ ವ್ಯವಸ್ಥಾಪಕರು (ಆ & ಮಾ ಸಂ) ಸಿಬ್ಬಂದಿಯಾದ ಆಶಿತ್ ರಾಜ್ ಅವರ 15 ವರ್ಷಗಳ ಕನಸು ನನಸಾಗಿದೆ.

ಬೆಳಗಾವಿ, ಕೊಲ್ಲಪುರ, ಅಹಮದಬಾದ್, ಗಾಂಧೀನಗರ, ಜೋದ್‌ಪುರ, ಆಗ್ರಾ, ದೆಹಲಿ, ಪಠಾಣಕೋಟ್, ಅಮೃತಸರ, ಜಮ್ಮು, ಶ್ರೀನಗರ, ಕಾರ್ಗಿಲ್, ಲೇಹ್, ಲಡಾಕ್, ಸರ್ಚು, ಮನಾಲಿ, ಚಂಡೀಘಢ, ವಾಲಿಯಾರ್, ನಾಗಪುರ, ಹೈದರಾಬಾದ್ ಹೀಗೆ ದೇಶದ ಪ್ರಮುಖ ಪ್ರದೇಶಗಳನ್ನು ಸುತ್ತಿ ಸುರಕ್ಷಿತವಾಗಿ ಮರಳಿದ್ದೇವೆ. ಅಮೃತಸರದಲ್ಲಿ ಅಟ್ಟೈರಿ ವಾಘಾ ಬಾರ್ಡರ್, ಕಾರ್ಗಿಲ್ ಹುತಾತ್ಮರ ಸ್ಮಾರಕಗಳು ಮರೆಯಲಾರದ ಅನುಭವ. ದೇಶದ ಪ್ರತಿಯೊಬ್ಬರೂ ನೋಡಬೇಕಾದ ಸ್ಥಳಗಳಿವು. ಇನ್ನು ವಾಹನ ತೆರಳುವ ವಿಶ್ವದ ಅತಿ ಎತ್ತರದ ಪ್ರದೇಶ ಉಮ್ಲಿಂಗ್ ಲಾ ಸಮುದ್ರ ಮಟ್ಟದಿಂದ 19,024 ಅಡಿ ಇರುವ ಈ ಪ್ರದೇಶದಲ್ಲಿ ಶೂನ್ಯಕ್ಕಿಂತ ಕಡಿಮೆ ತಾಪಮಾನ ಇರುತ್ತದೆ. ಅಲ್ಲಿಂದ ಅತೀ ಸಮೀಪದಲ್ಲಿ ಚೀನಾಗಡಿಯಿದೆ.




ಹಾಗೆಯೇ ನಾವು ತೆರಳಿದ ಹಾದಿಯುದ್ದಕ್ಕೂ ಅತೀ ಹೆಚ್ಚು ತಂಪಾದ ಸ್ಥಳಗಳಾದ ಸೋನಮಾರ್ಗ್ (ಕಾಶ್ಮೀರ್), ದ್ರಾಸ್ (ಲಡಾಕ್), ಶ್ರೀನಗರ (ಜಮ್ಮು& ಕಾಶ್ಮೀರ), ಲೇಹ್, ಮನಾಲಿ, ಜಿಸ್ಪಾ, ಬಾರಲಾಚ (ಹಿಮಾಚಲ ಪ್ರದೇಶ), ಕೀಲಾಂಗ್ ಇತ್ಯಾದಿ ಸ್ಥಳಗಳೇ ಹೆಚ್ಚು. ಅದಾಗ್ಯೂ ಮರುಭೂಮಿ, ರಾಜಸ್ಥಾನದಂತಹ ಸ್ಥಳಗಳಲ್ಲಿ ಅತೀ ಹೆಚ್ಚು ಬಿಸಿಲು ವಾತವರಣವಿದ್ದು, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ಪ್ರದೇಶಗಳಲ್ಲಿ ಮಳೆಯು ಹೆಚ್ಚಾಗಿತ್ತು. ಹೀಗೆ ಮಳೆ, ಬಿಸಿಲು, ಚಳಿ ಸೇರಿದಂತೆ ಬಹು ಹವಮಾನ ಹೊಂದಿರುವ ಪ್ರತಿ ಊರನ್ನು ದಾಟುವಾಗಲೂ ಅದರ ಹಿಂದಿರುವ ಇತಿಹಾಸ ಮೈ ರೋಮಾಂಚನವೆನಿಸುತ್ತಿತ್ತು.

ಸಮುದ್ರ ಮಟ್ಟದಿಂದ 1,585 ಮೀಟರ್ ಎತ್ತರದಲ್ಲಿರುವ "ಶ್ರೀನಗರವು" ಜೀಲಂ ನದಿಯ ತೀರದಲ್ಲಿದೆ. ಇದು ತನ್ನ ಜೀವ ವೈವಿಧ್ಯತೆ ಮತ್ತು ಅನನ್ಯ ಸೌಂದರ್ಯಕ್ಕೆ ಹೆಸರುವಾಸಿಯಾಗಿದೆ. ಶತಮಾನದಲ್ಲಿ ನಿರ್ಮಿಸಲಾದ, ಕಾಶ್ಮೀರದ ಅತಿದೊಡ್ಡ ಮಸೀದಿಯಾದ ಜಾಮಿಯಾ ಮಸೀದಿ (ಕಾಂಗ್ರೇಗೇಷನಲ್ ಮಸೀದಿ), ಗುಲ್ಮಾರ್ಗ್ ಹಾಗೂ ಹಿಮಾಲಯದ ಮತ್ತೊಂದು ಎತ್ತರದ ಪರ್ವತಗಳಲ್ಲಿ ಒಂದಾದ ನಂಗಾ ಪರ್ಬತ್ ಪ್ರದೇಶಗಳು ಪ್ರವಾಸಿಗರಿಗೆ ಮುದ ನೀಡುತ್ತದೆ.

ಲಡಾಕ್ ಗೆ ಪ್ರವೇಶದ್ವಾರವೆಂದೆ ಪರಿಗಣಿಸಲ್ಪಡುವ "ದ್ರಾಸ್" ಭೂಮಿಯ ಮೇಲಿನ 2ನೇ ಅತೀ ಶೀತ ಜನನಿಬಿಡ ಸ್ಥಳವೆಂದು ಗುರುತಿಸಿಕೊಂಡಿದೆ. ಈ ಸ್ಥಳದಿಂದ ಅಮರನಾಥ್, ಸುರು ಹಿಲ್ಸ್ ಮತ್ತು ಸಿಯಾಲ್ಕೋಟ್ ಅನ್ನು ಸುಲಭವಾಗಿ ತಲುಪಬಹುದು. ಬಹುತೇಕ ಇಲ್ಲಿಯ ವಾತವರಣವು -45°C ಇರುತ್ತದೆ. ಇನ್ನೂ 1995ರ ಚಳಿಗಾಲದಲ್ಲಿ - 60°C ಗೆ ಇಳಿದಾಗ ಅತ್ಯಂತ ತಣ್ಣನೆಯ ತಾಪಮಾನ ಹೊಂದಿರುವ ಪ್ರದೇಶವೆಂದು ಇತಿಹಾಸದಲ್ಲಿ ದಾಖಲಾಗಿದೆ.

ಶ್ರೀನಗರ-ದಾಸ್-ಲಡಾಕ್ ಮಧ್ಯ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 1 ರಲ್ಲಿ ಜೊಜಿಲಾ ಪಾಸ್ ಬರುತ್ತದೆ. ಈ ಹೆದ್ದಾರಿ ಮೂಲಕ ಲಡಾಕ್ ಪ್ರದೇಶವನ್ನು ತಲುಪಿದೆ. ಹಿಮಪಾತದ ಕಾರಣ ವರ್ಷದ 6 ತಿಂಗಳು ಈ ಪಾಸ್ ಅನ್ನು

ಮುಚ್ಚಲಾಗುತ್ತದೆ. ಆ ಅವಧಿಯಲ್ಲಿ ಇಲ್ಲಿ ಸಂಚಾರ ಸಂಪೂರ್ಣವಾಗಿ ಸ್ಥಗಿತವಾಗುತ್ತದೆ. ಅಲ್ಲದೇ ಇದು ಕಾಶ್ಮೀರ-ಕಾರ್ಗೀಲ್-ಲಡಾಕ್ ಪ್ರಾಂತಗಳಿಗೆ ಮತ್ತು ಗಿಲ್ಗಿಟ್ ಬಲ್ತಿಸ್ತಾನದ ಗಡಿಗೆ ಸಂಪರ್ಕ ಕಲ್ಪಿಸುವ ಏಕೈಕ ರಸ್ತೆಯಾಗಿದೆ.

ಇಲ್ಲಿನ ಭೂದೃಶ್ಯ, ಸ್ಪಟಿಕ ಸ್ಪಷ್ಟವಾದ ಆಕಾಶ, ಮೋಗಿಲೆತ್ತರದ ಪರ್ವತಗಳು, ಅರಮನೆ ಹಾಗು ಬೌದ್ಧ ಮಠವು ನಿಮಗೆ ಬೇರೆಯೇ ಪ್ರಪಂಚಕ್ಕೆ ಕರೆದೊಯ್ಯುತ್ತದೆ. ಏಷ್ಯಾದಲ್ಲೆ ಅತಿದೊಡ್ಡ ದೂರದರ್ಶಕವನ್ನು ಹೊಂದಿದ ಪ್ರದೇಶವು ಹೌದು. ಇಲ್ಲಿಯ ಆನ್‌ಲೇ ಎಂಬ ಸ್ಥಳದಲ್ಲಿ ಭಾರತೀಯ ಖಗೋಳ ವೀಕ್ಷಣಾಲಯ 4,500 ಮೀಟರ್‌ಗಿಂತಲೂ ಹೆಚ್ಚು ಎತ್ತರದಲ್ಲಿದ್ದು, ಅತಿದೊಡ್ಡದಾದ ದೂರದರ್ಶಕವನ್ನು ಹೊಂದಿದೆ.

ಹಾಗೂ ಇಲ್ಲಿನ ಬೆಟ್ಟ ಇಳಿಜಾರು ರಸ್ತೆಗಳಲ್ಲಿ ಪ್ರಯಾಣ ಮಾಡುವಾಗ ಭ್ರಮೆಯನ್ನುಂಟು ಮಾಡುತ್ತದೆ. ಇದು ಶ್ರೀನಗರ ಮತ್ತು ಲೇಹ್ ಹೆದ್ದಾರಿಯಲ್ಲಿ, ಮ್ಯಾಗ್ನೆಟಿಕ್ ಹಿಲ್ ಅಥವಾ ಗ್ರಾವಿಟಿ ಹಿಲ್ ಎಂದು ಸಹ ಕರೆಯಲ್ಪಡುವ ಬೆಟ್ಟವಾಗಿದೆ. ಇನ್ನೂ ದ್ರಾಸ್ ಮತ್ತು ಸುರ ನದಿಗಳ ನಡುವೆ ಇರುವ ಬೈಲಿ ಸೇತುವೆಯು ವಿಶ್ವದಲ್ಲಿಯೇ ಅತಿ ಎತ್ತರದ ಸೇತುವೆ ಎಂಬ ಹೆಗ್ಗಳಿಕೆಯನ್ನು ಪಡೆದಿದೆ. ಈ ಸೇತುವೆಯನ್ನು ಯುದ್ಧದ ಸಮಯದಲ್ಲಿ ನದಿಗಳ ಮೂಲಕ ತ್ವರಿತವಾಗಿ ವಲಸೆ ಹೋಗುವ ಸಲುವಾಗಿ ನಿರ್ಮಾಣ ಮಾಡಿದರು ಎಂಬ ಇತಿಹಾಸವಿದೆ.

ಲಡಾಕ್ ಪ್ರದೇಶದೊಳಗೆ ಪ್ರವೇಶಿಸಬೇಕೆಂದರೆ ಐ.ಎಲ್.ಪಿ (Inner Line Permit) ಪ್ರತಿಯನ್ನು ಪಡೆಯಬೇಕು. ಮೂಲತಃ ಭಾರತಿಯರಾದರೆ 3 ವಾರ ಹಾಗೂ ಹೊರದೇಶದವರಿಗೆ 1 ವಾರಗಳ ಕಾಲ ಪ್ರವಾಸ ಮಾಡಲು ಅವಕಾಶವಿರುತ್ತದೆ. ಪ್ರವೇಶ ಪಡೆದ ಬಳಿಕ ಲಡಾಕ್ ನ ಖಡಾರ್ಂಗ್ (ಗ್ರಾಮ), ಖರ್ದುಂಗ್ ಲಾ (ಪಾಸ್), ನುಬ್ರಾಕಣಿವೆ, ದಾಹ್, ಖಲ್ಸರ್, ವಾರ್ಸಿ ಮತ್ತು ಯರ್ಮಾಗೊನ್ಬೋ, ಪಚಾತಂಗ್, ನುಬ್ರಾ ಉಪವಿಭಾಗದಲ್ಲಿ ತ್ಯಾಕ್ಷಿ, ಖರು, ಚಾಂಗ್ಲಾ, ಡರ್ಬುಕ್, ತಾಂಗ್ಸೆ, ಲುಖುಂಗ್, ಮ್ಯಾನ್-ಮೆರಾಗ್ (ಪ್ಯಾಂಗಾಂಗ್ ಸರೋವರ), ಲೇಹ್ ಸೇರಿದಂತೆ ಮುಂತಾದ ಪ್ರದೇಶಗಳನ್ನು ಭೇಟಿ ಮಾಡಬಹುದು.

45 ವರ್ಷದ ಹಳೆ ಬುಲೆಟ್ ಅಲ್ಲಿ ಪ್ರವಾಸ: ಹೌದು! ಆಶಿತ್ ಅವರ ತಂದೆ ಬಹು ಆಸೆಯಿಂದ ಕೊಂಡ ಬುಲೆಟ್ (Bullet standard 350 – 79 model) ಇದು. ಅತಿಯಾದ ವಾತ್ಸಲ್ಯವನ್ನಿಟ್ಟ ಈ ಬೈಕ್‌ನಲ್ಲೆ ಪ್ರವಾಸ ಕೈಗೊಳ್ಳಬೇಕು ಎಂದು ನಿರ್ಧರಿಸಿದಾಗ ತಂದೆ-ತಾಯಿ, ಕುಟುಂಬಸ್ಥರು, ಆತ್ಮೀಯರು, ಸಹೋದ್ಯೋಗಿಗಳ ವಿರೋಧ ಸಹಜವಾಗಿತ್ತು. ಇದೆಲ್ಲದರ ನಡುವೆ ಪ್ರವಾಸಕ್ಕೆಗೊಂಡ ಆಶಿತ್ ಅವರಿಗೆ ದಾರಿಯ ಮಧ್ಯೆ ಅಡೆತಡೆಗಳು ತುಸು ಹೆಚ್ಚಾಗಿದ್ದವು. ಸುಮಾರು ಐದಾರು ಭಾರಿ ಇಂಜಿನ್ ಸಮಸ್ಯೆ, ಸ್ಪಾರ್ಕ್ ಪ್ಲಗ್ ಕೈಕೊಡುವುದು ಹೀಗೆ ಬೈಕ್ ಮಧ್ಯದಲ್ಲೇ ನಿಂತುಹೋಗುತ್ತಿತ್ತು. ತದನಂತರ ಅವರ ಪೋಷಕರು ಲಡಾಕ್ ಗೆ ಪ್ರಯಾಣ ಮುಂದುವರೆಸುವುದು ಬೇಡ ವಾಪಸ್ ಬರುವುದಾಗಿ ತಿಳಿಸಿದರೂ, ಬಗ್ಗದ ಆಶಿತ್ ಪ್ರಯಾಣ ಮುಂದುವರೆಸಿದರು.

**ಇವಿ ಮಿತ್ರಯೋಜನೆ ಪ್ರಚಾರ**: ಬೆಸ್ಕಾಂ ಹಾಗೂ ಇವಿ ಅಭಿಯಾನ ಟೀ ಶರ್ಟ್ ಧರಿಸಿಕೊಂಡು ಪ್ರವಾಸ ಹೊರಟ ಆಶಿತ್, ಹೋದದೆಲ್ಲೆಡೆ ಇವಿ ಅಭಿಯಾನದ ಕುರಿತು ಪ್ರಚಾರ ಮಾಡಿರುವುದು ಸಂತಸನೀಯ. ಪರಿಸರವನ್ನು ಕಲುಷಿತ ಮಾಡುವಲ್ಲಿ ವಾಹನಗಳು ಹೊರಸೂಸುವ ಹೊಗೆ ಕಾರಣವಾಗುತ್ತಿದೆ. ನವೀಕರಿಸಬಹುದಾದ ಇಂಧನಕ್ಕೆ ಒತ್ತು ಕೊಡುವ ಅವಶ್ಯಕತೆ ಹೆಚ್ಚಾಗಿದೆ.ಇವಿ ವಾಹನಗಳಿಗೆ ಅಗತ್ಯವಿರುವ ಚಾರ್ಜರ್'ಗಳನ್ನು ಕರ್ನಾಟಕ ಸರ್ಕಾರ ಇವಿ ಪಾಲಿಸಿ ಮಾಡುವ ಮೂಲಕ ಬೆಸ್ಕಾಂ ಅನ್ನು ನೋಡಲ್ ಏಜೆನ್ಸಿ ಮಾಡಿ ಬೆಂಗಳೂರಿನಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಹಾಗೆಯೇ ದೇಶದಲ್ಲೆಡೆ ಇವಿ ಅನ್ನು ಹೆಚ್ಚಾಗಿ ಬಳಸುವ ಮೂಲಕ ಪರಿಸರವನ್ನು ಸಂರಕ್ಷಿಸೋಣ ಎಂದು ಕರೆ ನೀಡಿದ್ದಾರೆ.




ಒಂದು ಕನಸು ನುಚ್ಚು ನೂರಾದ ನಂತರವೂ ಮತ್ತೊಂದು ಕನಸನ್ನು ಬೆನ್ನೆಟ್ಟುವತ್ತ ಧೈರ್ಯ ಮಾಡುವುದೇ ಜೀವನ. ಅಂತೆಯೇ ನನ್ನ ಬದುಕಲ್ಲಿ ಐ.ಎ.ಎಸ್ ಅಧಿಕಾರಿಯಾಗಬೇಕು, ಲೇಹ್ ಲಡಾಕ್ ಗೆ ಬೈಕ್‌ರೈಡ್ ಹೋಗ್ಬೇಕು ಎಂಬುದೇ ಮಹತ್ತರ ಗುರಿಯಾಗಿತ್ತು. ಯು.ಪಿ.ಎಸ್.ಸಿ ಗೆ ಹಗಲಿರುಳು ಶ್ರಮಪಟ್ಟು 2 ಪ್ರಿಲಿಮ್ಸ್ ಅಲ್ಲಿ ಉತ್ತೀರ್ಣನಾದೆ. ಆದರೆ ಮೇನ್ಸ್ ಅಲ್ಲಿ ಉತ್ತೀರ್ಣನಾಗಲಿಲ್ಲ.

ಮುಂದೆ ಲಡಾಕ್'ಗೆ ಬೈಕ್‌ರೈಡ್ ಹೋಗ್ಬೇಕು ಎಂಬ ಕನಸು ನನಸಾಗಿಸಬೇಕೆಂಬ ಹಂಬಲದಿಂದ ಸತತವಾಗಿ 2 ವರ್ಷಗಳ ಕಾಲ ಈ ಕುರಿತು ಇತಿಹಾಸ ಕೆದಕಿ, ಅಧ್ಯಯನ ಮಾಡಲಾರಂಭಿಸಿದೆ. ಸಂಬಂಧಿಸಿದ ಸಿನಿಮಾಗಳನ್ನು ನೋಡಿದೆ. ಕಡೆಗೂ ಒಟ್ಟು 28 ದಿನಗಳು, 7390 ಕಿ.ಮೀ ನ ಪ್ರವಾಸವನ್ನು ನನಸಾಗಿಸಿದ್ದೇನೆ. ಈ ನಿಟ್ಟಿನಲ್ಲಿ ನನಗೆ ಆತ್ಮತೃಪ್ತಿಯಿದೆ. ಅದ್ಯಾರೇ ಆಗಲಿ, ತಮ್ಮ ಕನಸು ನನಸಾಗುವವರೆಗೆ ನಿದ್ದೆ ಬಾರದಂತೆ ನಿರಂತರವಾಗಿ ಪ್ರಯತ್ನಿಸಿ. ಇಲ್ಲದಿದ್ದಲ್ಲಿ ನಿಮ್ಮ ಕನಸು ಕೇವಲ ಹಂಬಲ ಅನ್ನುವಷ್ಟಕ್ಕೆ ಉಳಿದುಬಿಡುತ್ತದೆ.

– **ಆಶಿತ್ ರಾಜ್**, ಸಹಾಯಕ, ಬೆಸ್ಕಾಂ

# ಬೆಸ್ಕಾಂ ಗ್ರಾಹಕರಿಗೆ 'ಜನ ಸ್ನೇಹಿ' ವಿದ್ಯುತ್ ಸೇವೆಗಳು ಲಭ್ಯ

ಅರ್ಜಿ ಸಲ್ಲಿಸಿದ 24 ಗಂಟೆಯೊಳಗೆ ಗೃಹ, ವಾಣಿಜ್ಯ ಚಟುವಟಿಕೆಗಳಿಗೆ ವಿದ್ಯುತ್ ಸಂಪರ್ಕಕಲ್ಪಿಸುವುದು ಸೇರಿದಂತೆ ತೆರಿಗೆ ಬದಲಾವಣೆ, ಹೆಸರು ಬದಲಾವಣೆ, ಹೊಸ ಹೆಸರು ಸೇರ್ಪಡೆ, ವಿದ್ಯುತ್ ಕಡಿತ ಸೇರಿದಂತೆ ಗ್ರಾಹಕರ ಸಂಪರ್ಕಕ್ಕೆ ಸೂಕ್ತ ಹಾಗೂ ವೇಗವಾದ ರೀತಿಯಲ್ಲಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಹಾಗೂ ಬೆಂಗಳೂರು ವಿದ್ಯುತ್ ಸರಬರಾಜು ಕಂಪ್ನನಿ ಲಿಮಿಟೆಡ್ (ಬೆಸ್ಕಾಂ) ಜನ ಸ್ನೇಹಿ ವಿದ್ಯುತ್ ಸೇವೆಗಳನ್ನು ಈಗಾಗಲೇ ಪ್ರಾರಂಭಿಸಿದೆ.

ಗೃಹ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಹೊಸ ವಿದ್ಯುತ್, ವಿದ್ಯುತ್ ಸ್ಥಾವರಗಳ ಮಾಲೀಕತ್ವ ಬದಲಾವಣೆ, ಹೊರೆ ಹೆಚ್ಚುವರಿಕೆ ಅಥವಾ ಇಳಿಸುವಿಕೆ ಸೇರಿದಂತೆ ವಿವಿಧ ವಿದ್ಯುತ್ ಸೇವೆಗಳಿಗೆ ಆನ್‌ಲೈನ್ ಅಥವಾ ಆಫ್‌ಲೈನ್ (ಕಂಪನಿಯ ಉಪವಿಭಾಗ) ನಲ್ಲಿ ಅರ್ಜಿ ಸಲ್ಲಿಸಿದ 24 ಗಂಟೆಯೊಳಗೆ ಸೇವೆ ಒದಗಿಸುತ್ತಿದೆ.

ವಿದ್ಯುತ್ ಸಂಪರ್ಕ ವಿಧಾನ ಸರಳೀಕರಣ, ಕನಿಷ್ಠ ದಾಖಲೆಗಳಿಂದ ಸೇವೆ ಪಡೆಯುವುದು, ಗ್ರಾಹಕರು ತಮ್ಮ ಅರ್ಜಿಯ ಪ್ರಗತಿಯನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ (ಜಾಲತಾಣ) ಟ್ರ್ಯಾಕ್ ಮಾಡುವುದು ಸೇರಿದಂತೆ ಅನೇಕ ಅನುಕೂಲಗಳು ಈ ಕಾರ್ಯಕ್ರಮದಿಂದ ಸಿಗಲಿವೆ. ಜನ ಸ್ನೇಹಿ ವಿದ್ಯುತ್ ಸೇವೆಗಳನ್ನು ಆರಂಭಿಸಿದ ನಂತರ ಕನಿಷ್ಠ ದಾಖಲೆಗಳೊಂದಿಗೆ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುತ್ತದೆ. ಈ ವೇಳೆ ಪಾರದರ್ಶಕತೆಯನ್ನು ದೃಢಪಡಿಸಿಕೊಳ್ಳುವುದರ ಜೊತೆಗೆ ಅರ್ಜಿದಾರರ ಎಸ್.ಎಂ.ಎಸ್ ಹಾಗೂ ಇ-ಮೇಲ್ ಮೂಲಕ ಸಂದೇಶವನ್ನು ರವಾನಿಸಲಾಗುತ್ತದೆ.

ಈ ಕೆಳಕಂಡ ಸೇವೆಗಳನ್ನು 24 ಗಂಟೆಯ ಅವಧಿಯೊಳಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದೆ :

1. **ಹೊಸ ಸಂಪರ್ಕ**: ಗೃಹಬಳಕೆ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ವಿದ್ಯುತ್ ಜಾಲದಲ್ಲಿ ವಿಸ್ತರಣೆ ಅಥವಾ ಮಾರ್ಪಾಡುಗಳಿಲ್ಲದ ಒಂದು ಅಥವಾ ಬಹು ಸಂಪರ್ಕವುಳ್ಳ 18 ಕಿ.ವ್ಯಾಟ್‌ಗಿಂತ ಕಡಿಮೆ ಹೊರೆ ಕೋರುವ ಅರ್ಜಿದಾರರಿಗೆ 24 ಗಂಟೆಯ ಅವಧಿಯೊಳಗೆ ವಿದ್ಯುತ್ ಸಂಪರ್ಕ.
2. **ಹೆಸರು ಬದಲಾವಣೆ**: ವಿದ್ಯುತ್ ಸ್ಥಾವರಗಳ ಮಾಲೀಕತ್ವವನ್ನು ಒಬ್ಬರ ಹೆಸರಿನಿಂದ ಇನ್ನೊಬ್ಬರ ಹೆಸರಿಗೆ ವರ್ಗಾಯಿಸುವ ಸೌಲಭ್ಯ.
3. **ಜಕಾತಿ ಬದಲಾವಣೆ**: ವಿದ್ಯುತ್ ಸ್ಥಾವರದ ಬಳಕೆಯ ಉದ್ದೇಶಕ್ಕನುಸಾರವಾಗಿ ಜಕಾತಿ (ಟಾರಿಫ್) ಬದಲಾಯಿಸುವ ಸೌಲಭ್ಯ.
4. **ಹೊರೆ ಹೆಚ್ಚುವರಿಕೆ ಅಥವಾ ಇಳಿಸುವಿಕೆ**: ಮಂಜೂರಾದ ಹೊರೆಯನ್ನು ಅವಶ್ಯಕತೆಗೆ ಅನುಗುಣವಾಗಿ ಮಾರ್ಪಾಡಿಸುವುದು.

## ಸಂಪಾದಕೀಯ



ದಸರಾ ಹಾಗೂ ದೀಪಾವಳಿ ಹಬ್ಬದ ಪ್ರಯುಕ್ತ ಎಲ್ಲಾ ಸಿಬ್ಬಂದಿಗಳಿಗೂ ಶುಭಾಶಯಗಳನ್ನು ತಿಳಿಸುತ್ತಾ, ಕಳೆದ ಎರಡು ವರ್ಷಗಳಿಂದ ಕೋವಿಡ್ ನಿಯಮಾನುಸಾರ ಹಬ್ಬಗಳ ಆಚರಣೆ ವಿಜೃಂಭಿಸಲು ಸಾಧ್ಯವಾಗಿರಲಿಲ್ಲ. ಆದರೆ ಈ ಭಾರಿ ಸಾರ್ವಜನಿಕರು ಹಬ್ಬಗಳನ್ನು ಸಾಮೂಹಿಕವಾಗಿ ಆಚರಿಸಲು ಸಜ್ಜಾಗುತ್ತಿದ್ದಾರೆ.

ಬೆಸ್ಕಾಂ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲೂ ಸಾಮೂಹಿಕವಾಗಿ ನಡೆಯುವ ದಸರಾ ಹಾಗೂ ದೀಪಾವಳಿ ಹಬ್ಬಗಳಲ್ಲಿ ದೀಪಾಲಂಕಾರ ವೀಕ್ಷಿಸುವ ಜನರು ವಿದ್ಯುತ್ ದೀಪಗಳನ್ನು ಸ್ಪರ್ಶಿಸುವುದು, ಸೆಲ್ಫಿ ತೆಗೆದುಕೊಳ್ಳುವಾಗ ದೀಪಗಳನ್ನು ಸ್ಪರ್ಶಿಸಲು ಪ್ರಯತ್ನಿಸುವುದು, ಮಕ್ಕಳು ಅಸುರಕ್ಷಿತ ಚಟುವಟಿಕೆಗಳನ್ನು ಮಾಡಿದರೆ ವಿದ್ಯುತ್ ಅವಘಡ ಸಂಭವಿಸುವ ಸಾಧ್ಯತೆ ಹೆಚ್ಚಿರುತ್ತದೆ.

ಈ ನಿಟ್ಟಿನಲ್ಲಿ ಸುರಕ್ಷತೆಯನ್ನು ಕಾಪಾಡಲು ಬೆಸ್ಕಾಂ ವ್ಯಾಪ್ತಿಯ ಆಯಾ ಜಿಲ್ಲೆಗಳಲ್ಲಿರುವ ಅಗತ್ಯ ಸಿಬ್ಬಂದಿ ವರ್ಗದವರು ಹಾಗೂ ಅಧಿಕಾರಿಗಳು ಈ ಕುರಿತು ಮುನ್ನೆಚ್ಚರಿಕ ಕ್ರಮವಹಿಸಿ ಸಾರ್ವಜನಿಕರಲ್ಲಿ ಸುರಕ್ಷತೆಯ ಅರಿವು ಮೂಡಿಸಲು ಸಹಕರಿಸಬೇಕು ಹಾಗೂ ವಿದ್ಯುತ್ ಸಂಪರ್ಕಗಳಿಂದ ಸಂಭವಿಸುವ ಯಾವುದೇ ಅವಘಡಗಳನ್ನು ನಿವಾರಿಸುವಲ್ಲಿ, ಸಾರ್ವಜನಿಕರಿಗೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಲ್ಲಿ ಹಾಗೂ ಅನಿಯಮಿತ ವಿದ್ಯುತ್ ವ್ಯತ್ಯಯ ಉಂಟಾದಲ್ಲಿ ಬೆಸ್ಕಾಂ ಸಿಬ್ಬಂದಿಗಳು ವಿದ್ಯುತ್ ಮಾರ್ಗವನ್ನು ದುರಸ್ಥಿಗೊಳಿಸಿ ವಿದ್ಯುತ್ ಸಂಚಾರಕ್ಕೆ ಅನುವು ಮಾಡಿಕೊಡಲು ಸದಾ ಸಿದ್ಧರಾಗಿರಲು ಕೋರುತ್ತೇನೆ.

**ಎಸ್.ಆರ್.ನಾಗರಾಜ**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ಬೆವಿಕಂ.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಇಂಧನ ಇಲಾಖೆ
ಕರ್ನಾಟಕ ಸರ್ಕಾರ



ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಶ್ರೀ ಕೆ.ಜೆ. ಜಾರ್ಜ್
ಸನ್ಮಾನ್ಯ ಇಂಧನ ಸಚಿವರು
ಕರ್ನಾಟಕ ಸರ್ಕಾರ

# ಗೃಹ ಜ್ಯೋತಿ ಯೋಜನೆ

**ಉಚಿತ ಬೆಳಕು, ಸುಸ್ಥಿರ ಬದುಕು**

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ 'ಗೃಹ ಜ್ಯೋತಿ' ಯೋಜನೆಯಡಿ ಪ್ರತಿ ಗೃಹ ಬಳಕೆಯ ಗ್ರಾಹಕರಿಗೆ **ಮಾಸಿಕ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್.**

- ಗ್ರಾಹಕರು ಸೇವಾ ಸಿಂಧು ಪೋರ್ಟಲ್ : https://sevasindhugs.karnataka.gov.in (ಮೊಬೈಲ್/ಕಂಪ್ಯೂಟರ್/ಲ್ಯಾಪ್‌ಟಾಪ್‌ಗಳಲ್ಲಿ) ಅಥವಾ ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್ ಕೇಂದ್ರಗಳಲ್ಲಿ, ಗ್ರಾಮ ಪಂಚಾಯತ್, ನಾಡಕಛೇರಿ ಅಥವಾ ಎಲ್ಲಾ ವಿದ್ಯುತ್ ಕಛೇರಿಗಳಲ್ಲಿ ನೋಂದಾಯಿಸಬಹುದಾಗಿದೆ.
- ನೋಂದಣಿ ಮಾಡುವಾಗ **ಆಧಾರ್ ಸಂಖ್ಯೆ**, ವಿದ್ಯುತ್ ಬಿಲ್‌ನಲ್ಲಿ ನೀಡಲಾದ **ವಿದ್ಯುತ್ ಖಾತೆ ಸಂಖ್ಯೆ** ಹಾಗೂ **ಮೊಬೈಲ್ ಸಂಖ್ಯೆಯನ್ನು** ನಮೂದಿಸಬೇಕು.
- ಹೆಚ್ಚಿನ ಮಾಹಿತಿಗಾಗಿ ಸಮೀಪದ ವಿದ್ಯುತ್ ಕಛೇರಿಯನ್ನು ಸಂಪರ್ಕಿಸಿ ಅಥವಾ **24 X 7 ಸಹಾಯವಾಣಿ ಸಂಖ್ಯೆ 1912** ಕ್ಕೆ ಕರೆಮಾಡಿ.

**ಗೃಹ ಜ್ಯೋತಿ**

**ನೋಂದಾಯಿಸಲು ನೀಡಲಾದ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ**

**ಇಂಧನ ಇಲಾಖೆಯ ಅಧಿಕೃತ ವೆಬ್‌ಸೈಟ್ ಗೆ ಭೇಟಿ ನೀಡಿ**
https://energy.karnataka.gov.in

**ನೋಂದಣಿ ಜೂನ್ 18, 2023 ರಿಂದ ಆರಂಭ**


## ಸಂಪಾದಕ ಮಂಡಳಿ


| | |
|---|---|
| **ಶ್ರೀ ಮಹಾಂತೇಶ ಬೀಳಗಿ**, ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ದರ್ಶನ್ ಜೆ**, ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಹೆಚ್.ಜೆ.ರಮೇಶ್**, ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ನಾಗರಾಜು ಎಸ್.ಆರ್**, ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) | ಸಂಪಾದಕರು |
| **ಶ್ರೀ ಡಾ. ಬಿ.ಅರವಿಂದ ಶೆಟ್ಟಿ**, ಸಾರ್ವಜನಿಕ ಸಂಪರ್ಕಾಧಿಕಾರಿ | ಸಹ ಸಂಪಾದಕರು |
| **ಶ್ರೀ ಇಂ. ಟಿ.ಎನ್.ಸುಧಾಕರರೆಡ್ಡಿ**, ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಕೆ.ಬಲರಾಮ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ಜಿ.ಹೆಚ್.ಆನಂದ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಇಂ. ರವೀಂದ್ರ**, ಕವಿಪ್ರನಿನಿ ಎಸ್ಸಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಸುರೇಶ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇಂ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ / ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-560 001.**

ಇ-ಮೇಲ್ ವಿಳಾಸ : gmcrbescom@gmail.com

ಬೆವಿಕಂ BESCOM

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ 1912**

**ಇ-ಮೇಲ್ ವಿಳಾಸ** : helplinebescom@gmail.com **ವೆಬ್‌ಸೈಟ್** : www.bescom.org